

ಇತಿಹಾಸ, ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಂತಿರುವ ಕೋಟೆ

ಈ ಕೋಟೆ, ಪ್ರಾಚೀನ ಭಾರತೀಯ ಕೋಟೆ ನಿರ್ಮಾಣ ಶೈಲಿಯ ಉತ್ಕೃಷ್ಟ ಉದಾಹರಣೆಯಾಗಿ ಪರಿಗಣಿಸಲಾಗುತ್ತದೆ. ಕೋಟೆಯ ಪ್ರಮುಖ ವೈಶಿಷ್ಟ್ಯಗಳಾಗಿ ಸುಮಾರು 4–5 ಮೀಟರ್ ದಪ್ಪವಿರುವ ಬಲಿಷ್ಠ ಕಲ್ಲಿನ ಗೋಡೆಗಳು ಗಮನಸೆಳೆಯುತ್ತವೆ. ಮಹಾರಾಣಿ ದ್ವಾರ ಮತ್ತು ಜೆಹಾಂಗೀರಿ ದ್ವಾರಗಳು ಕೋಟೆಯ ಪ್ರಮುಖ ಪ್ರವೇಶ ಬಾಗಿಲುಗಳಾಗಿ ಅದರ ವಾಸ್ತುಶಿಲ್ಪ ವೈಭವವನ್ನು ಪ್ರತಿಬಿಂಬಿಸುತ್ತವೆ.

ಕೋಟೆಯ ಒಳಭಾಗದಲ್ಲಿ ಅಂಬಿಕಾ ದೇವಿ, ಲಕ್ಷ್ಮೀನಾರಾಯಣ, ಸೀತಾರಾಮ ಹಾಗೂ ಜೈನ ಮಂದಿರಗಳು ಸ್ಥಿತಿಯಾಗಿದ್ದು, ಈ ಸ್ಥಳದ ಧಾರ್ಮಿಕ ಮಹತ್ವವನ್ನು ಸ್ಪಷ್ಟವಾಗಿ ಸಾರುತ್ತವೆ. ಇದಲ್ಲದೆ, ಅರಮನೆ ಪ್ರದೇಶ, ಸಭಾ ಭವನಗಳು, ಶಸ್ತ್ರಾಗಾರ ಪ್ರದೇಶಗಳ ಅವಶೇಷಗಳು ಇಲ್ಲಿ ಒಮ್ಮೆ ಚೇತನಶೀಲವಾಗಿದ್ದ ರಾಜಕೀಯ ಹಾಗೂ ಸೈನಿಕ ಜೀವನಕ್ಕೆ ಸಾಕ್ಷಿಯಾಗಿ ನಿಂತಿವೆ.

ಗಿರಿಕಂದರದ ನೈಸರ್ಗಿಕ ಶಿಲಾಸಂಗಮವನ್ನು ಆಧಾರವಾಗಿ ಬಳಸಿಕೊಂಡು ರೂಪಿಸಲಾದ ರಕ್ಷಣಾ ತಂತ್ರಜ್ಞಾನವು ಕಾಂಗ್ರಾ ಕೋಟೆಯ ಇನ್ನೊಂದು ವಿಶಿಷ್ಟ ಲಕ್ಷಣ. ಪ್ರಕೃತಿಯನ್ನೇ ತನ್ನ ರಕ್ಷಣೆಯಾಗಿ ಬಳಸಿಕೊಂಡ ಈ ವಿನ್ಯಾಸ, ಪ್ರಾಚೀನ ಭಾರತೀಯ ಕೋಟೆ ನಿರ್ಮಾಣದ ಜಾಣ್ಮೆಯನ್ನು ಅನಾವರಣಗೊಳಿಸುತ್ತದೆ. ಕೋಟೆಯೊಳಗಿನ ದೇವಸ್ಥಾನಗಳು ಇದರ ಧಾರ್ಮಿಕ ಮಹತ್ವವನ್ನು ಇನ್ನಷ್ಟು ಗಾಢಗೊಳಿಸುತ್ತವೆ. ಅಂಬಿಕಾ ದೇವಿ ದೇವಾಲಯವನ್ನು ಕಾಂಗ್ರಾ ಶಕ್ತಿಪೀಠಗಳಲ್ಲಿ ಒಂದಾಗಿ ಆರಾಧಿಸಲಾಗುತ್ತಿದ್ದು, ಶತಮಾನಗಳಿಂದ ಭಕ್ತರ ಆರಾಧನೆಯ ಕೇಂದ್ರವಾಗಿಯೇ ಉಳಿದಿದೆ.

ಸಿಖ್ಖರ ಕಾಲದಲ್ಲಿ ನಿರ್ಮಿಸಲಾದ ಕೋಟೆಯ ಪ್ರವೇಶದ್ವಾರವು ಎರಡು ದ್ವಾರಗಳ ನಡುವೆ ಸುತ್ತುವರಿದ ಸಣ್ಣ ಅಂಗಳದಲ್ಲಿ ಹಾದುಹೋಗುತ್ತದೆ. ಇಲ್ಲಿಂದ ಉದ್ದವಾದ ಮತ್ತು ಕಿರಿದಾದ ಮಾರ್ಗವು ಕೋಟೆಯ ಮೇಲ್ಭಾಗಕ್ಕೆ, ಅಹಾನಿ ಮತ್ತು ಅಮಿರಿ ದರ್ವಾಜಾ (ದ್ವಾರ) ಮೂಲಕ ಹಾದುಹೋಗುತ್ತದೆ. ಇದರ ಕೀರ್ತಿ ಕಾಂಗ್ರಾದ ಮೊದಲ ಮುಘಲ್ ಗವರ್ನರ್ ನವಾಬ್ ಸೈಫ್ ಅಲಿ ಖಾನ್‌ಗೆ ಸಲ್ಲುತ್ತದೆಯೆಂದು ಪ್ರವೇಶ ದ್ವಾರದ ಮೇಲಿನ ಶಾಸನದಿಂದ ಕಂಡುಬರುತ್ತದೆ. ಹೊರಗಿನ ದ್ವಾರದಿಂದ ಸುಮಾರು 500 ಅಡಿ ದೂರದಲ್ಲಿ ಮಾರ್ಗವು ತೀಕ್ಷ್ಣವಾದ ಕೋನದಲ್ಲಿ ತಿರುಗಿ ಜೆಹಾಂಗೀರಿ ದರ್ವಾಜಾ ಮೂಲಕ ಹಾದುಹೋಗುತ್ತದೆ. ಮುಂದೆ ಸಾಗಿದಂತೆ ಇಕ್ಕೆಲಗಳಲ್ಲಿ ಗಂಗಾ ಮತ್ತು ಯಮುನಾ ನದಿ ದೇವತೆಗಳ ವಿರೂಪಗೊಂಡ ಪ್ರತಿಮೆಗಳಿರುವ ದರ್ಶನಿ ದರ್ವಾಜಾ ಸಿಗುತ್ತದೆ. ಇಲ್ಲಿಂದ ಮುಂದೆ ಹೋದರೆ ವಿಶಾಲ ಅಂಗಳದಲ್ಲಿರುವ ಪ್ರಾಚೀನ ದೇವಾಲಯಗಳು, ವಿವಿಧ ದೇವತಾ ವಿಗ್ರಹಗಳು, ಕಲ್ಲಿನ ಗೋಡೆಗಳು, ಕೆತ್ತನೆ, ಮಂಟಪ, ಗರ್ಭಗೃಹದ ಭಾಗಗಳು ಮತ್ತು ಅದ್ಭುತ ಶಿಲ್ಪಕಲೆ ಕಾಣಸಿಗುತ್ತದೆ. ಇಲ್ಲಿನ ದೇವಾಲಯಗಳು ಶಾಕ್ತ, ವೈಷ್ಣವ ಹಾಗೂ ಜೈನ ಸಂಸ್ಕೃತಿಗಳ ಸಂಯೋಜನೆಯಾಗಿವೆ.

## ಭೂಕಂಪದ ನಂತರದ ಸ್ಥಿತಿ

1905ರಲ್ಲಿ ಸಂಭವಿಸಿದ ಭೀಕರ ಭೂಕಂಪವು ಕಾಂಗ್ರಾ ಕೋಟೆಗೆ ಅಪಾರ ಹಾನಿಯನ್ನುಂಟುಮಾಡಿತು. ಭೂಕಂಪದ ತೀವ್ರತೆಗೆ ಅನೇಕ ಕಟ್ಟಡಗಳು ನೆಲಸಮವಾಗಿದ್ದು, ಕೋಟೆಯೊಳಗಿನ ಹಲವು ದೇವಸ್ಥಾನಗಳು ಹಾಗೂ ಬಲಿಷ್ಠ ಕಲ್ಲಿನ ಗೋಡೆಗಳ ಬಹುಭಾಗ ಕುಸಿದುಬಿದ್ದವು. ಈ ದುರಂತದ ಬಳಿಕ ಕೋಟೆಯು ಕ್ರಮೇಣ ಅವಶೇಷ ರೂಪಕ್ಕೆ ತಿರುಗಿದರೂ, ಅದರ ಐತಿಹಾಸಿಕ ಮಹತ್ವವನ್ನು ಮನಗಂಡ ಬ್ರಿಟಿಷರು ಸಂರಕ್ಷಣಾ ಕ್ರಮಗಳನ್ನು ಕೈಗೊಂಡರು.

ಸಂಪೂರ್ಣ ಪುನರ್‌ನಿರ್ಮಾಣ ಸಾಧ್ಯವಾಗದಿದ್ದರೂ, ಉಳಿದ ಅವಶೇಷಗಳನ್ನು ಕಾಪಾಡುವ ಪ್ರಯತ್ನಗಳು ನಡೆಯಿತು. ಇದರಿಂದ ಕಾಂಗ್ರಾ ಕೋಟೆ ಇಂದು ಅವಶೇಷಗಳ ರೂಪದಲ್ಲಿದ್ದರೂ, ತನ್ನ ದೀರ್ಘ ಇತಿಹಾಸ, ಶೌರ್ಯ ಮತ್ತು ಸಾಂಸ್ಕೃತಿಕ ವೈಭವವನ್ನು ಮೌನವಾಗಿ ಸಾರುತ್ತಿರುವ ಅಮೂಲ್ಯ ಐತಿಹಾಸಿಕ ಸ್ಮಾರಕವಾಗಿ ಉಳಿದಿದೆ.

ಕೋಟೆಯ ಪ್ರಥಮ ಮತ್ತು ಪ್ರಮುಖ ದೇವಾಲಯ, ಕೋಟೆಯನ್ನು ರಕ್ಷಿಸುವ ಶಕ್ತಿ ಸ್ವರೂಪಿಣಿ ಎಂದೇ ನಂಬಲಾಗಿರುವ ದುರ್ಗಾ ದೇವಿ ದೇವಸ್ಥಾನ, ರಾಜವಂಶದ ಆಡಳಿತ, ಸಮೃದ್ಧಿ ಮತ್ತು ಧರ್ಮರಕ್ಷಣೆಯ ಸಂಕೇತವಾದ ವಿಷ್ಣು ಲಕ್ಷ್ಮೀಯರಿಗೆ ಸಮರ್ಪಿತವಾದ ದೇವಾಲಯ, ಬಹುಧಾರ್ಮಿಕ ಕೇಂದ್ರವೆನ್ನುವುದಕ್ಕೆ ಸಾಕ್ಷಿಯಾಗಿ ಜೈನ ದೇವಾಲಯಗಳು ಮತ್ತು ತೀರ್ಥಂಕರರ ವಿಗ್ರಹಗಳನ್ನು ಇಲ್ಲಿ ನೋಡಬಹುದಾಗಿದೆ.

### ಸಾಂಸ್ಕೃತಿಕ ಪರಂಪರೆ

ಕಾಂಗ್ರಾ ಕೋಟೆ ಕಲೆ, ಯೋಗ, ಶಕ್ತಿ ತತ್ವ ಮತ್ತು ಹಿಮಾಲಯ ಪ್ರದೇಶದ ಸಾಂಸ್ಕೃತಿಕ ಚೈತನ್ಯದ ಜೀವಂತ ಪ್ರತಿರೂಪವಾಗಿದೆ. ಶತಮಾನಗಳ ಕಾಲ ಈ ಕೋಟೆ ಕಲಾ–ಸಂಸ್ಕೃತಿಗಳ ಪೋಷಕ ಕೇಂದ್ರವಾಗಿಯೂ ಬೆಳೆಯಿತು.

ಇಲ್ಲಿನ ಸಾಂಸ್ಕೃತಿಕ ವೈಭವಕ್ಕೆ ಪ್ರಮುಖ ಕೊಡುಗೆಯಾಗಿ ಕಾಂಗ್ರಾ ಮಿನಿಯೇಚರ್ ಚಿತ್ರಕಲೆಯನ್ನು ಗುರುತಿಸಬಹುದು. ಈ ಚಿತ್ರಶೈಲಿ ಇಂದು ಭಾರತದ ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆಯ ಅಮೂಲ್ಯ ಭಾಗವಾಗಿ ಪರಿಗಣಿಸಲ್ಪಟ್ಟಿದೆ. ಕಾಂಗ್ರಾ ಮಿನಿಯೇಚರ್ ಚಿತ್ರಕಲೆ ಶೃಂಗಾರ ಮತ್ತು ಭಕ್ತಿಭಾವದ ಸೂಕ್ಷ್ಮ ಅಭಿವ್ಯಕ್ತಿ, ಕೃಷ್ಣಲೀಲೆಗಳ ಸೌಂದರ್ಯಮಯ ಚಿತ್ರಣ, ಸಂಗೀತದ ಲಯಾತ್ಮಕತೆ ಹಾಗೂ ನೈಸರ್ಗಿಕ ದೃಶ್ಯಗಳ ನಾಜೂಕಾದ ನಿರೂಪಣೆಗೆ ಪ್ರಸಿದ್ಧವಾಗಿದೆ.

### ಪ್ರವಾಸೋದ್ಯಮವೇ ಜೀವಾಳ

ಕಾಂಗ್ರಾ ಕೋಟೆಯು ಹಿಮಾಚಲ ಪ್ರದೇಶದ ಧರ್ಮಶಾಲಾ ಪಟ್ಟಣದಿಂದ 20 ಕಿಲೋ ಮೀಟರ್ ದೂರದಲ್ಲಿರುವ ಕಾಂಗ್ರಾ ಪಟ್ಟಣದ ಹೊರವಲಯದಲ್ಲಿದೆ. ಇಂದು ಕಾಂಗ್ರಾ ಕೋಟೆ ಹಿಮಾಚಲ ಪ್ರದೇಶದ ಪ್ರಮುಖ ಪ್ರವಾಸಿ ಆಕರ್ಷಣೆಯಾಗಿದೆ. ಪ್ರತಿವರ್ಷ ದೇಶ ವಿದೇಶಗಳಿಂದ ಸಾವಿರಾರು ಪ್ರವಾಸಿಗರು, ಸಂಶೋಧಕರು, ಇತಿಹಾಸಾಸಕ್ತರು ಇಲ್ಲಿಗೆ ಭೇಟಿ ನೀಡುತ್ತಾರೆ. ಕೋಟೆಯ ಮೇಲ್ಭಾಗದಿಂದ ಕಾಣುವ ಹಿಮಾಲಯ ಪರ್ವತಶ್ರೇಣಿಯ ನೋಟ ಮನಮೋಹಕ. ಕೋಟೆಯ ಸುತ್ತಮುತ್ತಲಿನ ಧರ್ಮಶಾಲಾ, ಮೆಕ್ಲಿಯೋಡ್ ಗಂಜ್ (Mc LeodGanj), ಪಲಂಪುರ್, ಬೈಜನಾಥ್ ಮುಂತಾದ ಸ್ಥಳಗಳು ಪ್ರವಾಸದ ಮೌಲ್ಯವನ್ನು ಹೆಚ್ಚಿಸಿವೆ. ಮಹಿಳಾ ಶಕ್ತಿ ಪೀಠವಾದ ಜ್ವಾಲಾ ದೇವಿ, ಚಾಮುಂಡಾ ದೇವಿ ಹಾಗೂ ಬಜ್ರೇಶ್ವರಿ ದೇವಾಲಯಗಳೂ ಕಾಂಗ್ರಾ ಜಿಲ್ಲೆಯಲ್ಲಿರುವುದು ಯಾತ್ರೆಗೂ ಪ್ರೇರಕ.

463 ಎಕರೆ ಪ್ರದೇಶದಲ್ಲಿ ಹರಡಿರುವ ಕಾಂಗ್ರಾ ಕೋಟೆಯು ಭಾರತದ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಧೀನದಲ್ಲಿದೆ. ಕಾಂಗ್ರಾ ಕೋಟೆಯನ್ನು ಜುಲೈನಿಂದ ಸೆಪ್ಟೆಂಬರ್ ತಿಂಗಳುಗಳನ್ನು ಹೊರತುಪಡಿಸಿ, ವರ್ಷದ ಮಿಕ್ಕೆಲ್ಲಾ ತಿಂಗಳುಗಳು ವೀಕ್ಷಿಸಲು ಸೂಕ್ತ. ■